**DAY & DATE: MONDAY, APRIL 20th, 2026**

**Matter: "Open Day - 2026"**

**As appeared in the Newspapers:**

**VIJAYAVANI**
(Bengaluru, Page No. 04)

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ಪ್ರತಿಭೆ ಅನಾವರಣಕ್ಕೆ ಪ್ರತಿ ಕಾಲೇಜಿನಲ್ಲಿ ವೇದಿಕೆ ಅವಶ್ಯಕ

ವಿಜಯವಾಣಿ



**ಬಿಎನ್‌ಎಂಐಟಿ ಕಾಲೇಜಿನಲ್ಲಿ ಆಯೋಜಿಸಿದ್ದ ಓಪನ್ ಡೇ ಕಾರ್ಯಕ್ರಮದಲ್ಲಿ ಶೈಲೇಶ್ ಸಕ್ರಿ, ನಾರಾಯಣ ರಾವ್ ಮಾನೆ, ಡಾ.ಕುಲಕರ್ಣಿ ಇತರರಿದ್ದರು.**

- **ಶೈಲೇಶ್ ಸಕ್ರಿ ಅಭಿಮತ**
- **ಬಿಎನ್‌ಎಂಐಟಿ ಕಾಲೇಜಿನಲ್ಲಿ ಓಪನ್ ಡೇ**

**ಬೆಂಗಳೂರು:** ಜಗತ್ತಿನ ಸಮಸ್ಯೆಗಳಿಗೆ ಪರಿಹಾರಗಳನ್ನು ಒದಗಿಸಲು ಓಪನ್ ಡೇ ತರಹದ ಕಾರ್ಯಕ್ರಮಗಳನ್ನು ಪ್ರತಿ ಕಾಲೇಜಿನಲ್ಲಿ ಆಯೋಜಿಸುವ ಅವಶ್ಯಕತೆ ಇದೆ ಎಂದು ಆಟೋಮೋಟಿವ್ ಹರ್ಮಾನ್ ಇಂಟರ್‌ನ್ಯಾಷನಲ್ ಸಂಸ್ಥೆಯ ನಿರ್ದೇಶಕ ಶೈಲೇಶ್ ಸಕ್ರಿ ಹೇಳಿದ್ದಾರೆ.

ಬಿಎನ್‌ಎಂಐಟಿ ಕಾಲೇಜಿನಲ್ಲಿ ಆಯೋಜಿಸಿದ್ದ ಓಪನ್ ಡೇ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಮೊದಲ ವರ್ಷದಲ್ಲಿಯೇ ಈ ರೀತಿಯ ಪ್ರಾಜೆಕ್ಟ್ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿರುವುದರಿಂದ ಪ್ರಾಯೋಗಿಕ ಕಲಿಕೆಯಾಗಲಿದೆ. ಓಪನ್ ಡೇನಲ್ಲಿ 100ಕ್ಕೂ ಅಧಿಕ ಮಳಿಗೆಗಳು ಭಾಗವಹಿಸಿದ್ದು, ಪ್ರತಿ ಮಳಿಗೆಗಳೂ ವೈಜ್ಞಾನಿಕ ಮತ್ತು ತಾಂತ್ರಿಕ ಮಾಹಿತಿಯ ಕೇಂದ್ರಗಳಾಗಿವೆ. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಇದೊಂದು ಮಹತ್ತರ ಕಾರ್ಯಕ್ರಮವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಇಸ್ರೋ, ಬಿಎಚ್‌ಇಎಲ್, ಡಿಆರ್‌ಡಿಒ, ಎಚ್‌ಎಂಟಿ ಯಂತಹ ಸಂಸ್ಥೆಗಳು ತಮ್ಮ ವಿವಿಧ ನೂತನ ಯೋಜನೆಗಳ ಕುರಿತು ಮಾಹಿತಿ ನೀಡಿದವು. ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಸೇರಿ 100ಕ್ಕೂ ಹೆಚ್ಚು ಯೋಜನೆಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಡಿಡಿಪಿಯು ಮನೋಜ್ ಕುಮಾರ್ ಕೊಳ್ಳಾ, ಪ್ರಾಂಶುಪಾಲ ಡಾ. ಎಸ್.ವೈ. ಕುಲಕರ್ಣಿ, ನಿರ್ದೇಶಕ ಪ್ರೊ. ಟಿ.ಜಿ. ರಾಮಮೂರ್ತಿ, ಉಪ ನಿರ್ದೇಶಕ ಡಾ. ಜಿ.ಎನ್. ಕೃಷ್ಣಮೂರ್ತಿ, ಚಾರಿಟಿ ಟ್ರಸ್ಟಿ ಈಶ್ವರ್ ಎನ್. ಮಾನೆ ಉಪಸ್ಥಿತರಿದ್ದರು.

> **ವಿದ್ಯಾರ್ಥಿಗಳಲ್ಲಿ ಅಡಗಿರುವ ಆಲೋಚನೆಗಳನ್ನು ಹೊರತರ ಬೇಕಾದಲ್ಲಿ ಈ ರೀತಿಯ ಕಾರ್ಯಕ್ರಮಗಳು ಅವಶ್ಯಕವಾಗಿವೆ. ಒಂದಕ್ಕಿಂತ ಒಂದು ಪ್ರಾಜೆಕ್ಟ್‌ಗಳು ಚೆನ್ನಾಗಿವೆ. ತಂತ್ರಜ್ಞಾನ ಬದಲಾವಣೆ ವೇಗವಾಗಿ ಆಗುತ್ತಿರುವುದು ಇಲ್ಲಿನ ಪ್ರಾಜೆಕ್ಟ್‌ಗಳಲ್ಲಿ ಕಾಣುತ್ತಿದೆ. ಕಾಲೇಜಿನಲ್ಲಿ ಪ್ರಾಯೋಗಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ.**
>
> | **ನಾರಾಯಣ ರಾವ್ ಆರ್. ಮಾನೆ**
> ಬಿಎನ್‌ಎಂ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ